ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 139-143
©*IIMRD*, Mysuru

IIMRD JOURNALS
www.iimrd.com

# ರಾಜಾ ವೀರಮದಕರಿ ನಾಯಕನ ಕಾಲದ ಸಾಹಿತ್ಯ : ಚಾರಿತ್ರಿಕ ಅವಲೋಕನ

**ಡಾ. ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

**ಸಾರಾಂಶ: (Abstract)**

*ರಾಜಾ ವೀರಮದಕರಿ ನಾಯಕನ ಕಾಲವು ಚಿತ್ರದುರ್ಗದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಿದೆ. ಈ ಅವಧಿಯಲ್ಲಿ ಸಾಹಿತ್ಯವು ಸಮಕಾಲೀನ ರಾಜಕೀಯ ಘಟನೆಗಳು, ಸಾಮಾಜಿಕ ಬದುಕು, ಧಾರ್ಮಿಕ ನಂಬಿಕೆಗಳು ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಪ್ರಮುಖ ಮಾಧ್ಯಮವಾಗಿ ಬೆಳೆಯಿತು. ವೀರಮದಕರಿ ನಾಯಕನ ಆಡಳಿತ, ಸಾಹಸ, ಯುದ್ಧಗಳು ಮತ್ತು ಆಡಳಿತಾತ್ಮಕ ಚಟುವಟಿಕೆಗಳು ವಿವಿಧ ಸಾಹಿತ್ಯ ಕೃತಿಗಳು ಹಾಗೂ ಐತಿಹಾಸಿಕ ದಾಖಲೆಗಳಲ್ಲಿ ಪ್ರತಿಫಲಿಸಿವೆ. ಸ್ಥಳೀಯ ಕವಿಗಳು ಮತ್ತು ಸಾಹಿತಿಗಳು ರಾಜನ ವ್ಯಕ್ತಿತ್ವ, ಶೌರ್ಯ, ಪ್ರಜಾಪಾಲನೆ ಹಾಗೂ ಚಿತ್ರದುರ್ಗದ ವೈಭವವನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಈ ಸಾಹಿತ್ಯಿಕ ಕೃತಿಗಳು ಅಂದಿನ ಸಮಾಜದ ಜೀವನಕ್ರಮ, ರಾಜಕೀಯ ಪರಿಸ್ಥಿತಿ, ಧಾರ್ಮಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಪ್ರಮುಖ ಆಕರಗಳಾಗಿವೆ. ಈ ಲೇಖನವು ವೀರಮದಕರಿ ನಾಯಕನ ಕಾಲಘಟ್ಟದ ಸಾಹಿತ್ಯವನ್ನು ಚಾರಿತ್ರಿಕ ದೃಷ್ಟಿಕೋನದಿಂದ ಅವಲೋಕಿಸಿ, ಅದರ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುತ್ತದೆ.*

**ಮುಖ್ಯಪದಗಳು (Keywords):** *ವೀರಮದಕರಿ ನಾಯಕ, ಚಿತ್ರದುರ್ಗ, ಸಾಹಿತ್ಯ, ಚಾರಿತ್ರಿಕ ಅವಲೋಕನ, ಸಾಂಸ್ಕೃತಿಕ ಇತಿಹಾಸ*

## ಪೀಠಿಕೆ

ಚಿತ್ರದುರ್ಗ ಎಂದಾಕ್ಷಣ ಸ್ಮೃತಿಗೊಳ್ಳುವ ರಾಜಾ ವೀರಮದಕರಿ ನಾಯಕ, ಏಳುಸುತ್ತಿನ ಕೋಟೆ, ಒನಕೆ ಓಬವ್ವೆ ಮತ್ತು ಮುರುಘಾಮಠಗಳೊಂದಿಗೆ ನಾಡಿನ ಜನತೆಗೆ ಸುಪರಿಚಿತವಾಗಿರುವ ಚಿತ್ರದುರ್ಗ 'ಗಂಡುಮೆಟ್ಟಿನ ನಾಡು' ಎಂದು ಪ್ರಸಿದ್ಧಿ ಪಡೆದಿದೆ. ಗಂಡುಮೆಟ್ಟಿನ ನಾಡು ಎಂಬ ಅಭಿದಾನಕ್ಕೆ ಅಪವಾದವಾಗದಂತೆ ಆಳ್ವಿಕೆ ನಡೆಸಿದವನು ಚಿತ್ರದುರ್ಗ ಪಾಳೆಯಪಟ್ಟಿನ ಕೊನೆಯ ದೊರೆ ಚಿಕ್ಕ ರಾಜಾ ವೀರಮದಕರಿ ನಾಯಕ.

ಹಿರೇಮದಕರಿನಾಯಕನ ತರುವಾಯ ಅಧಿಕಾರಕ್ಕೆ ಬಂದ ಅವನ ಮಗ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ. ೧೭೪೯–೧೭೫೪) ಮರಾಠರು ಮತ್ತು ಹರಪನಹಳ್ಳಿ ಪಾಳೆಯಗಾರರಿಂದ ತನ್ನ

***Please cite this article as***: ರೇವಣಸಿದ್ದಪ್ಪ, ಎಸ್. (2026). ರಾಜಾ ವೀರಮದಕರಿ ನಾಯಕನ ಕಾಲದ ಸಾಹಿತ್ಯ : ಚಾರಿತ್ರಿಕ ಅವಲೋಕನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 139–143

ರಾಜ್ಯ ರಕ್ಷಿಸಿಕೊಳ್ಳುವ ಹೋರಾಟದಲ್ಲಿಯೇ ಹೆಚ್ಚಿನ ಕಾಲ ಕಳೆದನು. ಚಿತ್ರದುರ್ಗ ಪಾಳೆಯಪಟ್ಟು ಸ್ವತಂತ್ರಗೊಂಡಾಗಿನಿಂದ ರಾಜಾ ವೀರಮದಕರಿ ನಾಯಕನ ಕಾಲದವರೆಗೂ ಆಳ್ವಿಕೆ ನಡೆಸಿರುವ ಅರಸರೆಲ್ಲರೂ ತಮ್ಮ ಜೀವಿತಾವಧಿಯ ಹೆಚ್ಚಿನ ಕಾಲವನ್ನು ಯುದ್ಧ ಭೂಮಿಯಲ್ಲಿಯೇ ಕಳೆದಿರುವುದರಿಂದ ಇವರ ಚರಿತ್ರೆ 'ಬಿಚ್ಚುಗತ್ತಿ'ಯ ಚರಿತ್ರೆ ಎಂದು ಗುರುತಿಸಲ್ಪಟ್ಟಿದೆ. ಕ್ರಿ.ಶ. ೧೭೫೪ರಲ್ಲಿ ಅನಾರೋಗ್ಯಪೀಡಿತನಾಗಿ ತೀರಿಕೊಂಡನು. ಎರಡನೇ ಕಸ್ತೂರಿ ರಂಗಪ್ಪನಾಯಕನಿಗೆ ಪುತ್ರ ಸಂತಾನ ಇಲ್ಲದೆ ಇದ್ದ ಕಾರಣ, ಅವನ ತಾಯಿ ಗಂಡಿಲ ಓಬಳವ್ವನಾಗತಿ ಹೊಸ ಅರಸನನ್ನು ಪಟ್ಟಕ್ಕೆ ಕೂಡಿಸುವವರೆಗೆ ಚಿತ್ರದುರ್ಗದ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡು ಎರಡು ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಳು.[೧]

ಇಮ್ಮಡಿ ಕಸ್ತೂರಿ ರಂಗಪ್ಪನಾಯಕನು ಸಂತಾನಹೀನನಾಗಿ ಕಾಲವಾದಾಗ, ಇವನ ತಾಯಿ ಗಂಡಿಲ ಓಬಳವ್ವನಾಗತಿ ತನ್ನ ಸಹೋದರರಾದ ನರಸಪ್ಪನಾಯಕ ಮತ್ತು ನೀಲಪ್ಪನಾಯಕನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಪ್ರಯತ್ನಿಸಿದ್ದಳು; ಆದರೆ ಅದು ಫಲಿಸಿರಲಿಲ್ಲ. ಪರಿಣಾಮ, ಕಸ್ತೂರಿ ರಂಗಪ್ಪನಾಯಕ ಮರಣ ಹೊಂದುವ ಮೊದಲು ದತ್ತು ತೆಗೆದುಕೊಂಡಿದ್ದ ದೊಡ್ಡ ಮದಕರಿನಾಯಕನಿಗೆ ಪಟ್ಟದಕತ್ತಿ ಕೊಡಿಸಿ, ಜ್ಞಾತಿಪುತ್ರನಾದ ಚಿಕ್ಕ ಮದಕರಿನಾಯಕನಿಗೆ ರಾಜಮುದ್ರೆ ಕೊಡಿಸಿ, ಸಂಸ್ಥಾನದ ಮೇಲೆ ಯಜಮಾನತ್ವ ಮತ್ತು ರಾಜ್ಯದ ಆಡಳಿತ ನೋಡಿಕೊಳ್ಳುವಂತೆ ಏರ್ಪಾಟು ಮಾಡಿದ್ದಳು.

ಕ್ರಿ.ಶ. ೧೭೫೪ ರಿಂದ ೧೭೭೯ರ ವರೆಗೆ ಆಳಿದ ರಾಜಾ ವೀರಮದಕರಿ ನಾಯಕನ ಕಾಲದ ಇತಿಹಾಸ ಚಿತ್ರದರ್ಗದ ಚರಿತ್ರೆಯಲ್ಲಿಯೇ ಅತ್ಯಂತ ರೋಚಕವಾಗಿದೆ. ಇವನ ಸಾಹಸ ಕಾರ್ಯಗಳು ಇಂದಿಗೂ ಜನಮಾನಸದಲ್ಲಿ ಮನೆಮಾತಾಗಿ ಉಳಿದಿವೆ. ಇವನು ಜಯಿಸಿದ ಅನೇಕ ಯುದ್ಧಗಳಿಗಿಂತ, ಹೈದರಾಲಿಯನ್ನು ಎದುರಿಸಿದನೆಂಬ ಕಾರಣಕ್ಕೆ ಹೆಚ್ಚು ಪ್ರಸಿದ್ಧನಾಗಿದ್ದಾನೆ. ಚಿತ್ರದುರ್ಗ ಸಂಸ್ಥಾನದ ಚರಿತ್ರೆಯಲ್ಲಿ ರಾಜಾ ವೀರಮದಕರಿ ನಾಯಕನ ಆಳ್ವಿಕೆ ಅತ್ಯಲ್ಪ ಕಾಲದ್ದಾಗಿದ್ದರೂ ಸಂಸ್ಥಾನದ ಸಾಹಸ ಚರಿತ್ರೆಗೆ ತಕ್ಕುದಾದ ಚರಿತ್ರೆಯಾಗಿದೆ. ಕ್ರಿ.ಶ. ೧೭೫೪ ರಿಂದ ೧೭೭೫ರ ವರೆಗೆ ಆಡಳಿತ ನಡೆಸಿರುವ ರಾಜಾ ವೀರಮದಕರಿ ನಾಯಕ, ರಾಜಾ ಚಿಕ್ಕ ವೀರಮದಕರಿ ನಾಯಕನ ಮತ್ತು ಕಡೆಯ ಮದಕರಿನಾಯಕನೆಂತಲೂ ಕರೆಯಲ್ಪಟ್ಟಿದ್ದಾನೆ. ಇವನ ಆಳ್ವಿಕೆಯ ಕಾಲ ಯುದ್ಧಗಳೊಂದಿಗೆ ಹೆಚ್ಚು ಮುಖಾಮುಖಿ ಆಗಿದ್ದರೂ, ಸಾಹಿತ್ಯ, ಧರ್ಮ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿನ ಸುಧಾರಣೆ ಮತ್ತು ಬೆಳವಣಿಗೆಗಳಿಂದಲೂ ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಈ ಲೇಖನ ರಾಜಾ ವೀರಮದಕರಿ ನಾಯಕನ ಕಾಲದ ಸಾಹಿತ್ಯದಲ್ಲಿನ ಬೆಳವಣಿಗೆಗಳ ಚಾರಿತ್ರಿಕ ಅವಲೋಕನ ಮಾಡಲು ವಿಶೇಷ ಮಹತ್ವ ನೀಡುತ್ತದೆ.

ಚಿತ್ರದುರ್ಗದ ಅರಸರು ಸಾಹಿತ್ಯಾಸಕ್ತರು ಮತ್ತು ಸಾಹಿತಿಗಳ ಪೋಷಕರೂ ಆಗಿದ್ದರು. ಇವರು ತಮ್ಮ ಸಂಸ್ಥಾನದ ಜನರ ಮನೋಭಾವನೆಗಳನ್ನು, ತಮ್ಮ ಆಸೆ–ಆಕಾಂಕ್ಷೆಗಳನ್ನು, ಅಂದಿನ ಸಾಮಾಜಿಕ ಬದುಕಿನ ರೀತಿ–ನೀತಿಗಳನ್ನು ಪ್ರತಿಬಿಂಬಿಸುವ ಸಾಹಿತ್ಯದ ರಚನೆಗೆ ಕಾರಣಕರ್ತರಾಗಿದ್ದಾರೆ. ಇವರ ಕಾಲದ ಸಾಹಿತ್ಯ ಅಂದಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಅಂಶಗಳನ್ನು ಅರಿಯಲು ಸಹಾಯಕವಾಗಿದೆ. ಯಾವುದೇ ಒಂದು ಅರಸು ಮನೆತನದ ಸಾಹಿತ್ಯ ಮತ್ತು ಸಂಸ್ಕೃತಿ ಅವರ ಸರ್ವತೋಮುಖ ಅಭಿವೃದ್ಧಿಯ ಸೂಚಕಗಳಾಗಿರುತ್ತವೆ.

ಕವಿ ಚಂದ್ರಭೀಮಯ್ಯ ರಾಜಾ ವೀರಮದಕರಿ ನಾಯಕನ ಪ್ರೋತ್ಸಾಹದಿಂದ 'ಮದಕರಿ ರಾಜೇಂದ್ರ ದಂಡಕ' ಎಂಬ ಕೃತಿಯನ್ನು ರಚಿಸಿದ್ದನು. ಚಂದ್ರಭೀಮಯ್ಯ ಕವಿ ಕೊಡಗನೂರು ಪ್ರಾಂತ್ಯದ ಗ್ರಾಮಾಧಿಕಾರಿ ಆಗಿದ್ದನು. ತನ್ನ ಕೆಲಸದಲ್ಲಿ ದಕ್ಷತೆಯಿಂದಿದ್ದು ಅರಸನ ಪ್ರೀತಿಗೆ ಪಾತ್ರನಾಗಿದ್ದನು. ಒಮ್ಮೆ ಆ ಪ್ರಾಂತ್ಯದಲ್ಲಿ ಬರಗಾಲ ಕಾಣಿಸಿಕೊಂಡಾಗ ಅರಸನಿಗೆ ನೀಡಲು ಸಂಗ್ರಹ ಮಾಡಿದ್ದ ಧಾನ್ಯದಲ್ಲಿ ಒಂದಷ್ಟು ಪ್ರಮಾಣವನ್ನು ಬರಪೀಡಿತ ಜನರಿಗೆ ಹಂಚಿದ್ದನು. ಇಂತದ್ದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ಇವನ ವಿರೋಧಿಗಳು ಅರಸನಿಗೆ ಚಾಡಿ ಹೇಳಿದ್ದರು. ಪರಿಣಾಮ, ರಾಜಾ ವೀರಮದಕರಿ ನಾಯಕ ಚಂದ್ರಭೀಮಯ್ಯನನ್ನು ಸೆರೆಯಲ್ಲಿಟ್ಟಿದ್ದನು. ರಾಜಭಕ್ತನಾಗಿದ್ದ ಚಂದ್ರಭೀಮಯ್ಯ ಸೆರೆಮನೆಯಲ್ಲಿ ಇದ್ದುಕೊಂಡೇ 'ಮದಕರಿ ರಾಜೇಂದ್ರ ದಂಡಕ' ಕೃತಿಯನ್ನು ರಚಿಸಿದ್ದನು. ಒಮ್ಮೆ, ರಾಜಾ ವೀರಮದಕರಿ ನಾಯಕ ಸೆರೆಮನೆ ಕಡೆ ಹೋಗಿದ್ದಾಗ, ಚಂದ್ರಭೀಮಯ್ಯ ತನ್ನ ಕೃತಿಯನ್ನು ಅರಸನೆದುರು ವಾಚಿಸಿದ್ದನು. ದಂಡಕವನ್ನು ಕೇಳಿ ಹರ್ಷಿತನಾಗಿದ್ದ ರಾಜಾ ವೀರಮದಕರಿ ನಾಯಕ ಅವನನ್ನು ಸೆರೆಯಿಂದ ಬಿಡುಗಡೆಗೊಳಿಸಿ ಸನ್ಮಾನ ಮಾಡಿದ್ದನು.[೩]

ತನ್ನ ಕೃತಿಯಲ್ಲಿ ತನ್ನನ್ನು 'ಚಂದ್ರಭೀಮಾಖ್ಯ ವಿದ್ವತ್ಕವೀಂದ್ರ'[೪] ಎಂದು ಕರೆದುಕೊಂಡಿರುವ ಚಂದ್ರಭೀಮಯ್ಯ ತನ್ನ ದಂಡಕದಲ್ಲಿ ಆ ಕಾಲದ ವೇಷಭೂಷಣಗಳನ್ನು, ಅರಸನ ಆಸ್ಥಾನದಲ್ಲಿ ನಡೆಯುತ್ತಿದ್ದ ನಿತ್ಯ ವ್ಯವಹಾರಗಳನ್ನು, ನಡೆನುಡಿಗಳನ್ನು ವಿವರಿಸಿದ್ದಾನೆ. ಅಲ್ಲದೆ, ನಾನಾಜಿ ಫೌಜಿಗೂ ಹಾಗೂ ಮದಕರಿನಾಯಕನ ಫೌಜಿಗೂ ನಡೆದ ಕಾಳಗದ ವಿಷಯವನ್ನೂ ಪ್ರಸ್ತಾಪಿಸಿದ್ದಾನೆ. ಇದರ ಮೂಲಕ ರಾಜಾ ವೀರಮದಕರಿ ನಾಯಕನ ದಿನಚರಿಯನ್ನು ದಾಖಲಿಸಿದ್ದಾನೆ.[೫]

ಈ ದಿನಚರಿಯ ಪ್ರಕಾರ ಒಂದು ದಿನ ಉದಯಕಾಲದಲ್ಲೆದ್ದು ಚಂದ್ರಮೌಳೀಶ್ವರನನ್ನು ಧ್ಯಾನಿಸಿ, ಪಂಚಾಂಗವನ್ನು ಕೇಳಿ, ದೇಹ ನೈರ್ಮಲ್ಯವನ್ನು ಹೊಂದಿ, ಸುಗಂಧ ಪರಿಮಳದ ನೀರಿನಿಂದ ಮುಖವನ್ನು ತೊಳೆದು, ಹಣೆಯಲ್ಲಿ ಭಂಡಾರವನ್ನಿಟ್ಟು, ವಸ್ತ್ರಾಲಂಕೃತನಾಗಿ, ಮಂದಿಗಳು ಪರಾಕು ಹೇಳುತ್ತಿರಲು, ಗರಡಿಮನೆಯನ್ನು ಹೊಕ್ಕು, ಶ್ರೀಕೃಷ್ಣನ ಸಂದರ್ಶನದಿಂದ ಆನಂದಿತನಾಗಿ ದಂಡೆಯನ್ನು ಮಾಡಿ, ಮಲ್ಲರೊಡನೆ ಕುಸ್ತಿಯನ್ನು ಮಾಡಿ, ಅವರನ್ನು ತಲ್ಲಣಗೊಳಿಸಿ ಅರಮನೆಗೆ ಹಿಂತಿರುಗುತ್ತಿದ್ದನು. ಸತ್ಸಂಪ್ರದಾಯಗಳಿಂದ ಮಂಗಳಸ್ನಾನ ಮಾಡಿ, ಚಂದ್ರಮೌಳೀಶ್ವರನನ್ನು ಧ್ಯಾನಿಸಿ, ಶೇಷಗಂಧ ಪ್ರಸಾದಗಳನ್ನು ಧರಿಸಿ, ಸನ್ನಿತರ ಪಂಕ್ತಿಯಲ್ಲಿ ಭೋಜನ ಮಾಡಿ, ಚಿನ್ನದ ತಟ್ಟೆಯಲ್ಲಿ ಕೈ ತೊಳೆದು, ಭೂಷಣ ವಿಶೇಷಗಳನ್ನು ಧರಿಸಿ, ಕರ್ಪೂರ ತಾಂಬೂಲವನ್ನು ಸವಿದು ಧನುರ್ಬಾಣಗಳನ್ನೂ ಗಂಡುಗೊಡಲಿ ಮೊದಲಾದ ಆಯುಧಗಳನ್ನೂ ಧರಿಸಿ ಹೊರಟು, ಭಾರಿ ಹಜಾರವನ್ನು ಸೇರಿ ಸಿಂಹಾಸನಾರೂಢನಾಗಿ ಪೂರ್ಣೇಂದುವಂತೆ ರಾರಾಜಿಸುತ್ತಿದ್ದನು. ಆಶ್ರಿತರು ಕಪ್ಪವನ್ನು ಒಪ್ಪಿಸಿದರು.[೬] ಈ ದಂಡಕದಲ್ಲಿ ಸಭೆಯ ವಿವರಣೆ ತುಂಬಾ ಸೊಗಸಾಗಿ ವರ್ಣಿತವಾಗಿದೆ.

ರಾಜಾ ವೀರಮದಕರಿ ನಾಯಕನ ಆಸ್ಥಾನದಲ್ಲಿ ಮರಾಠರ ಪೇಶ್ವ ಮಾಧವರಾವ್‌ನಿಂದ ಪುಣೆಯ ಪ್ರತಿನಿಧಿಯಾಗಿ ಬಂದು ಉಪಸ್ಥಿತನಿದ್ದವನು ಭೀಮೋಜಿಪಂತ್. ಇವನು ಪೇಶ್ವೆಗಳಿಗೆ ಬರೆದ ಬರಹ ಚಿತ್ರದುರ್ಗದ ಬಖೈರು ಎಂದು ಕರೆಯಲ್ಪಟ್ಟಿದೆ. ಈ ಬಖೈರು ಚಿತ್ರದುರ್ಗ ಅರಸರ ಪೂರ್ವಚರಿತ್ರೆಯನ್ನು ತಿಳಿಸುವುದರೊಂದಿಗೆ ಹೈದರಾಲಿಗೂ ರಾಜಾ ವೀರಮದಕರಿ ನಾಯಕನಿಗೂ ನಡೆದ ಕದನದ ವಿವರವನ್ನು

ಒಳಗೊಂಡಿದೆ. ಹೈದರಾಲಿ ರಾಜಾ ವೀರಮದಕರಿ ನಾಯಕನನ್ನು ಸ್ವಾಧೀನಪಡಿಸಿಕೊಳ್ಳಲು ಹೂಡಿದ ಉಪಾಯಗಳನ್ನೂ, ಹೈದರಾಲಿ ರಾಜಾ ವಿರಮದಕರಿ ನಾಯಕನ ಸ್ನೇಹಿತನಾಗಲು ಬಯಸಿದ್ದನ್ನೂ, ಅದು ಸಾಧ್ಯವಾಗದ ಸಂದರ್ಭವನ್ನೂ, ರಾಜಾ ಮದಕರಿ ಹೈದರಾಲಿಯೊಂದಿಗೆ ಯುದ್ಧಮಾಡಲು ಅಣಿಯಾದ ಸಂದರ್ಭವನ್ನೂ, ಮರಾಠರ ನೆರವು ಸಕಾಲಕ್ಕೆ ಸಿಗದಿದ್ದಾಗ ಹೆದರದೆ ವೈರಿಗಳನ್ನು ಎದುರಿಸಿದ್ದ ಪರಾಕ್ರಮದ ಬಗೆಯನ್ನೂ, ಅರಸನ ಗೆಲುವಿಗೆ ಕಾರಣರಾದ ಸೈನಿಕರ ಸ್ವಾಮಿನಿಷ್ಠೆಯನ್ನೂ ಮತ್ತು ಚಿತ್ರದುರ್ಗದ ಪಡೆಯಲ್ಲಿದ್ದ ಕೆಲವು ಮುಸ್ಲಿಂ ಸೈನಿಕರ ವಂಚನೆಯನ್ನೂ ಈ ಬಖೈರು ವಿವರಿಸುತ್ತದೆ.[೭]

ಈ ಬಖೈರು ಪ್ರಾರಂಭವಾಗುವುದು ಹೀಗೆ "ಶ್ರೀಮಂತ ಮಹಾರಾಜ ದಕ್ಷಿಣ ದೇಶದಲ್ಲಿ ಚಿನ್ಮೂಲಾದ್ರಿ ಎಂಬ ಪರ್ವತಶ್ರೇಷ್ಠದಲ್ಲಿ ಕಾಮಗೇತ್ತುವಂಶ ರಾಜಾ ಮದಕರಿನಾಯಕ ಎಂಬುವನು ಮಹಾ ಪರಾಕ್ರಮಿಶಾಲಿ ಧರ್ಮಪುಣ್ಯ ಯಶೋಮೂರ್ತಿ ಅವತಾರನಾಗಿ ಕಲಿಯುಗದಲ್ಲಿ ಧರ್ಮರಾಯಪ್ರಾಯ ಸಂಪತ್ಸವೃದ್ಧಿಯಿಂದ ಪುತ್ರಮಿತ್ರ ಬಂಧುಜನ ಸಹಿತಾ ಸಿಂಹಾಸನಾರೂಢರಾಗಿ ಸಕಲ ಧರ್ಮಶಾಸ್ತ್ರದಿಂದ ರಾಜ್ಯಭಾರ ಮಾಡುತ್ತಾ ಇರುವಲ್ಲಿ ಈ ದೇಶದಲ್ಲಿ ಷಡ್ರುತು ಒಂದೇ ಪ್ರಕಾರ ನಡೆಯುತ್ತಿತ್ತು. ಬ್ರಾಹ್ಮಣ ಜನ ಯಾವತ್ತೂ ತ್ರಿಕಾಲ ಸಂಧ್ಯಾ ಜಪತಪ ದೇವತಾರ್ಚನ ಆತ್ಮೀಕ ಸ್ತೋತ್ರ ಪಟ್ಟರ್ಮದಿಂದ ಮಹಾರಾಜ ರಾಜಾಸಾಹೇಬ್ ಇವರಿಗೆ ಶ್ರೇಯ ಪ್ರಾರ್ಥನೆ ಮಾಡುತ್ತಾ ಪರಮಸಂತೋಷದಿಂದ ಇದ್ದರು."[೮]

ಹೈದರಾಲಿ ಚಿತ್ರದುರ್ಗದ ಕೋಟೆಯ ಕುರಿತಾಗಿ ನೀಡಿದ್ದ ವಿವರಣೆ ಬಖೈರಿನಲ್ಲಿ ಈ ರೀತಿ ಇದೆ; "ಚಿತ್ರದುರ್ಗದ ಷಹರು ಪನಾಖಿಲ್ಲೆ, ಬಹಳ ಕಂದಕ, ಬಹಳವಾಗಿ ನೀರು ಕಾಣುತ್ತೆ, ಎಲ್ಲಿ ನೋಡಿದಾಗ್ಯೂ ಬತೇರಿ ಮೇಲೆ ತೋಪುಗಳೇ ಕಾಣುತ್ತೆ, ಶಿವಾಯಿ ಸುವರ್ಣ ಕಲಶಗಳು ಝಳ ಝಳಾಯಮಾನವಾಗಿ ಕಾಣುತ್ತೆ. ಅನೇಕ ಧ್ವಜಪೂರಿತ ಲಂಕಾಪಟ್ಟಣ ಪ್ರಕಾರ ಕಾಣುತ್ತೆ. ಒಂದು ದೊಡ್ಡ ಟೇಕಡಿ ಮೇಲೆ ಕುಸುಂಬಿ ಝಾಂಡ್ಯ ನಿಲ್ಲಿಸಿದ್ದಾರೆ. ಈ ಮೇರೆಗೆ ಶೋಭಾಯಮಾನವಾಗಿ ಕಾಣುತ್ತೆ. ಕಿಲ್ಲೆ ನೋಡಿದರೆ ಜಂಬೂದ್ವೀಪಕ್ಕೆ ಕುವಲಯ ಮಧ್ಯ ದೇಶಾಖ್ಯ ಕುಲಕ್ಕೆ ಕರ್ಣಿಕ ಪ್ರಾಯದ್ವಿರಾಜಮಾನವಾಗಿ ಕಾಣುತ್ತೆ. ಈ ಊರು ದೊರೆ ಲಾಲಗಡದ ಮೇಲೆ ನಮ್ಮನ್ನು ನೋಡುವುದಕ್ಕೆ ನಾನಾವಿಧ ಆಪ್ತಗಿರಿ ಚಾಮರ ವಗೈರೆ ಶ್ವೇತಛತ್ರಿ ಹಿಡಿದು ಇದೆ. ಮೊಹರ್ಚಲ್ಲು ಹಾಕುತ್ತೆ. ಹತ್ತಿರ ದೊಡ್ಡ ದೊಡ್ಡ ಸರದಾರರು ನಿಂತು ಇದ್ದಾರೆ. ಭಾಟಿ, ಭಟಂಗಿ, ತಾಫೇದಾರರು ೧೦-೧೨ ಜೋಡಿ ನಿಂತಿದ್ದಾರೆ. ಈ ಮೇರೆಗೆ ಕಾಣುತ್ತೆ, ಶಿವಾಯಿ ಬಹಳವಾಗಿ ಉಪವನದಲ್ಲಿರುವ ಮಲ್ಲಿಕಾ, ಜಾಜಿ, ಪಂಚ ಗುಲಾಬ್, ಕಮಲ, ವಗೈರೆ ಪುಷ್ಪದ ಸುವಾಸನೆ ಬರುವುದರಿಂದ ಮನಸ್ಸು ಹರ್ಷಾಯಮಾನವಾಗಿ ಕಾಣುತ್ತೆ. ಶಿವಾಯಿ ನಾನಾ ಪಕ್ಷಿ ಜಾತಿ ಇದೆ. ಫೌಜು ಬಂದದ್ದು ಭಯವಿಲ್ಲದೆ ಷಹರಿನ ಹೆಂಗಸರು ಅಲಂಕಾರರಾಗಿ ತಿರುಗುವುದಕ್ಕೆ ಕಾಣುತ್ತೆ. ನಾವು ಇಷ್ಟು ಷಹರು ನೋಡಿದೆವು. ಈ ಷಹರಿನ ಆತೈಶ್ವರ್ಯ ಒಪ್ಪಂದ ಯಾವುದೂ ಇಲ್ಲ, ಕರ್ಣಾಟಕ ದೇಶ ಶ್ರೀರಂಗಪಟ್ಟಣ, ಶ್ರೀರಂಗಸ್ವಾಮಿ, ಕಾವೇರಿ ನದಿಯಿಂದ ಶ್ರೇಷ್ಠ. ಇದು ಇಲ್ಲದಿದ್ದರೆ ಈ ಊರಿಗೇನು ಹೆಚ್ಚು ಕಾಣುವುದಿಲ್ಲ. ಶಿವಾಯಿ ಜನಾನು ಬಹಳ ಮರ್ದಮಯಿದೆ. ಇಲ್ಲಿಯ ರಾಜಾನೂ ಬಹಳ ಮರ್ದಮ. ಈ ಫೌಜೂನೂ ಬಹಳ ಮೊಗರೂರು ಇದೆ. ಏಕಾಏಕೀ ಹಲ್ಲಾ ಮಾಡುವುದಕ್ಕೆ ಆಗುವುದಿಲ್ಲಾ, ಸ್ವಾಧೀನಕ್ಕೆ ಬರುವುದು ಬಹಳ ಕಠಿಣವಿದೆ."[೯]

ರಾಜಾ ವೀರಮದಕರಿ ನಾಯಕನ ಆಸ್ಥಾನದಲ್ಲಿ ಕೋನಪ್ಪ ಎಂಬ ಇನ್ನೊಬ್ಬ ಕವಿ ಆಶ್ರಯ ಪಡೆದಿದ್ದನು. ಇವನು ಕೃಷ್ಣಾರ್ಜುನರ ಸಂಗರವನ್ನು ರಚಿಸಿದ್ದಾನೆ. ಚನ್ನಬಸವಣ್ಣ ಎಂಬ ಕವಿ ರಾಜಾ ವೀರಮದಕರಿ ನಾಯಕ, ಹರಪನಹಳ್ಳಿ ಪಾಳೆಯಗಾರರು, ರಾಯದುರ್ಗದ ಪಾಳೆಯಗಾರರು ಹಾಗೂ ಸವಣೂರಿನ ನವಾಬರನ್ನು ಸೋಲಿಸಿದ್ದ ಸಂದರ್ಭಗಳನ್ನು ಕುರಿತು ಲಾವಣಿಯನ್ನು ರಚಿಸಿದ್ದಾನೆ.[೧೦] ಇವನ ಆಸ್ಥಾನದಲ್ಲಿ 'ನಂಜಾ' ಎನ್ನುವ ವೀರಶೈವ ಕವಿ ಆಶ್ರಯ ಪಡೆದಿದ್ದನು. ಇವನು ಕಪೋತವಾಕ್ಯ ಎಂಬ ಅಖ್ಯಾನವನ್ನು ಸಾಂಗತ್ಯ ರೂಪದಲ್ಲಿ ರಚಿಸಿದ್ದಾನೆ.[೧೧] ಲಾಳಸಿಂಗಿ ಸೋಮಣ್ಣನು ರುಕ್ಮಾಂಗದ ಚರಿತ್ರೆ, ಸ್ಮರವಿಜಯ, ಲಿಖಿತ ಲೀಲಾ, ಲಕ್ಷ್ಮೀ ಸ್ವಯಂವರ, ಶಾಪವಿಮೋಚನೆ, ಚಂದ್ರಹಾಸ ಮುಂತಾದ ಯಕ್ಷಗಾನ ಮತ್ತು ಬಯಲು ನಾಟಕಗಳನ್ನು ರಚಿಸಿದ್ದಾನೆ. ಇವನು 'ಹಗಲು ಕಗ್ಗೊಲೆಯಮಾನ್ಯ' ಎಂಬ ಪ್ರಸಿದ್ಧವಾದ ಕೃತಿಯನ್ನೂ ರಚಿಸಿದ್ದಾನೆ.[೧೨]

ರಾಜಾ ವೀರಮದಕರಿ ನಾಯಕನ ಕಾಲದ ಸಾಹಿತ್ಯದ ಬೆಳವಣಿಗೆ ಅಂದಿನ ಕಾಲದ ಜನಜೀವನ ಮತ್ತವರ ಸಾಂಸ್ಕೃತಿಕ ಬದುಕಿನ ಸಂಸ್ಕೃತಿ ಮತ್ತು ಸಮಾಜವನ್ನು ಅರ್ಥೈಸುವುದಕ್ಕಿಂತ ಹೆಚ್ಚಾಗಿ, ರಾಜಾ ವೀರಮದಕರಿ ನಾಯಕನ ಸಾಹಸ ಸಂದರ್ಭಗಳನ್ನು ಕುರಿತು ಹೆಚ್ಚು ಚರ್ಚಿಸುತ್ತವೆ. ಆದಾಗ್ಯೂ ಆ ಕಾಲದ ಯುದ್ಧ ಕಾಲದ ಸಂಸ್ಥಾನದ ಬದುಕನ್ನು ಅರ್ಥಮಾಡಿಕೊಳ್ಳು ಹೆಚ್ಚು ಉಪಯುಕ್ತವಾಗಿವೆ.

**ಕೊನೆಟಿಪ್ಪಣಿಗಳು**


1. ಅಮರೇಶ ಯತಗಲ್, ೨೦೧೮, ಕರ್ನಾಟಕ ನಾಯಕ ಅರಸುಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು, ಪಲ್ಲವಿ ಪಬ್ಲಿಕೇಷನ್, ಲಿಂಗಸಗೂರು, ಪು. ೩೬.
೨. ಲಕ್ಷ್ಮಣ್ ತೆಲಗಾವಿ, ೧೯೯೨, ಚಿತ್ರದುರ್ಗನಾಯಕ ಅರಸರು–ರಾಜಕೀಯಚಿತ್ರ, ದವನಸಿರಿ, ಪು. ೮೩.
೩. ಲಕ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸ್(ಸಂ), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು. ೬೬.
೪. ಅದೇ, ಪು. ೬೮.
೫. ಅದೇ, ಪು. ೬೯.
೬. ಲಕ್ಮಣ್ ತೆಲಗಾವಿ, ೧೯೮೭, ಕಾಮಗೇತಿ ಅರಸರು: ಕೆಲವು ವಿಚಾರಗಳು–ಪ್ರತಿಕ್ರಿಯೆಗಳು, ಮಾನವಿಕ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೫೪.
೭. ಹುಲ್ಲೂರು ಶ್ರೀನಿವಾಸ ಜೋಯಿಸ(ಸಂ), ೧೯೩೮, ಚಿತ್ರದುರ್ಗದ ಬಖೈರು, ಪು. ೨.
೮. ಅದೇ, ಪು. ೬೬–೬೭.
೯. ವಸು ಎಂ.ವಿ., ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೪.
೧೦. ಅದೇ, ಪು. ೧೧೬.
೧೧. ಲಕ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸ್(ಸಂ), ೧೯೭೬, ಪೂರ್ವೋಕ್ತ, ಪು. ೧೬೦.